**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧೀಕಾರಿಗಳು,**

**ಕಿತ್ತೂರ ಇವರ ನ್ಯಾಯಾಲಯದಲ್ಲಿ.**

**ಸಿ.ಸಿ 49/2021**

| | | |
|---|---|---|
| ಸಾಕ್ಷಿದಾರರ ಹೆಸರು | - ಶಂಕ್ರಯ್ಯ ಬಸವಣ್ಣಯ್ಯ ಮಾವಿನಕಟ್ಟಿ | ಸಿಡಬ್ಲ್ಯೂ**-01**<br>ಪಿಡಬ್ಲ್ಯೂ**-01** |
| ವಯಸ್ಸು | - **63** ವರ್ಷ | ಪ್ರ.ವ.ಬೋ ದಿ**: 10.10.2025** |
| ಉದ್ಯೋಗ | - ನಿವೃತ್ತ **PSI** | |
| ವಾಸ | - ಕಾದ್ರೋಳ್ಳಿ | |

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-</u>**

ನಾನು 2019 ರಿಂದ 2022 ರವರೆಗೆ PSI ಅಂತಾ ಕಿತ್ತೂರು ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **17.09.2020** ರಂದು ಸಾಯಂಕಾಲ **07.15** ಗಂಟೆಗೆ ನಾನು ಠಾಣೆಯಲ್ಲಿದ್ದಾಗ ತುರಕರ ಶಿಗಿಹಳ್ಳಿ ಗ್ರಾಮದ ಸಾರ್ವಜನಿಕ ರಸ್ತೆಯಲ್ಲಿ ಯಾರೋ ಒಬ್ಬ ವ್ಯಕ್ತಿ ಯಾವುದೋ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿರುತ್ತಾನೆ ಎಂದು ನನಗೆ ಬಾತ್ಮಿ ಬಂದಿರುತ್ತದೆ ನನಗೆ ಚಾಸಾ **4** ರವರು ತಿಳಿಸಿದರು**.** ನಂತರ ನಾನು ಕೂಡಲೇ ಚಾಸಾ **4** ಮತ್ತು **5** ರವರನ್ನು ಕರೆಯಿಸಿ ಅವರಿಗೂ ಸಹ ವಿಚಾರವನ್ನು ತಿಳಿಸಿ ಚಾಸಾ **4** ರವರಿಂದ ಇಬ್ಬರೂ ಪಂಚರಾದ ಚಾಸಾ **2** ಮತ್ತು **3** ರವರನ್ನು ಕರೆಯಿಸಿ ಅವರಿಗೂ ಸಹ ವಿಚಾರವನ್ನು ತಿಳಿಸಿ ನಾವೆಲ್ಲರೂ ಸರ್ಕಾರಿ ವಾಹನದಲ್ಲಿ ಘಟನಾ ಸ್ಥಳಕ್ಕೆ ದಾಳಿಗಾಗಿ ಹೋಗಿರುತ್ತೇವೆ**.** ಘಟನಾ ಸ್ಥಳ ತಲುಪಿದಾಗ ಸಮಯ ಸಾಯಂಕಾಲ **07.30** ಆಗಿತ್ತು**.** ಘಟನಾ ಸ್ಥಳಕ್ಕೆ ಹೋದ ಕೂಡಲೇ ನಾವು ಮರೆಯಲ್ಲಿ ನಮ್ಮ ವಾಹನವನ್ನು ನಿಲ್ಲಿಸಿ ವಿಕ್ಷಣೆಯನ್ನು ಮಾಡಿರುತ್ತೇವೆ**.** ಅಲ್ಲಿ ಒಬ್ಬ

ವ್ಯಕ್ತಿಯು ಬಿಳಿ ಬಣ್ಣದ ಚೀಲದಲ್ಲಿ ಏನು ವಸ್ತುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ನಂತರ ನಾವು ಸಾಯಂಕಾಲ **08.15** ಗಂಟೆಗೆ ದಾಳಿ ಮಾಡಿರುತ್ತೇವೆ. ಇದರಿಂದ ನಾವು ಹಿಡಿಯಲು ಹೋದಾಗ ಸಾರ್ವಜನಿಕರೆಲ್ಲರೂ ಓಡಿ ಹೋಗಿರುತ್ತಾರೆ ಆದರೆ ಆರೋಪಿತನು ನಮಗೆ ಸಿಕ್ಕಿರುತ್ತಾರೆ. ಆಗ ಅವನ ಹೆಸರನ್ನು ವಿಚಾರಿಸಿದಾಗ ಲಾಲಸಾಬ ಇಮಾಮಸಾಬ ದಾವಲನವರ ಎಂದು ನಮಗೆ ತಿಳಿಸಿರುತ್ತಾರೆ. ಅವರು ಬಳಿ ಇದ್ದ ಕೈ ಚೀಲದಲ್ಲಿ ಯಾವ ವಸ್ತುಗಳು ಇವೆ ಎಂದು ಪ್ರಶ್ನಿಸಿದಾಗ ಮದ್ಯ ತುಂಬಿದ ಸ್ಯಾಚೇಟಗಳು ಇವೆ ಎಂದು ಉತ್ತರಿಸಿರುತ್ತಾನೆ. ಸದರಿಯವನು ಪರಾರಿಯಾಗುವ ಸಂಭವ ಕಂಡುಬಂದಿದ್ದರಿಂದ ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ವರದಿಯನ್ನು ತಯಾರಿಸಿ ಆರೋಪಿತನನ್ನು ಮದ್ಯ ತುಂಬಿದ ಸ್ಯಾಚೇಟಗಳ ಬಗ್ಗೆ ವಿಚಾರಿಸಿದಾಗ ಅವರು ಅವುಗಳ ಸ್ವಾಧೀನಕ್ಕೆ ಯಾವುದೇ ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ ಹಾಗೂ ಯಾವುದೇ ಪರವಾಣಿಗೆಯನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಅವರು ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿದು ಕೈ ಚೀಲವನ್ನು ತೆಗೆದು ನೋಡಿದಾಗ ಅದರಲ್ಲಿ ಹೈವರ್ಡ್ಸ ವಿಸ್ಕಿ ಯ **90 ML** ನ **31** ಸ್ಯಾಚೇಟಗಳು ನಮಗೆ ದೊರೆತಿರುತ್ತವೆ. ಸದರಿ ಮುದ್ದೆಮಾಲುಗಳ ಪೈಕಿ ಹೈವರ್ಡಸ ವಿಸ್ಕಿಯ **90 ML** ನ ಒಂದು ಸ್ಯಾಚೇಟನ್ನು ಮಾದರಿ ಪರೀಕ್ಷೆಗಾಗಿ ಪ್ರತ್ಯೇಕ ಮಾಡಿ ಶೀಲ ಮಾಡಿರುತ್ತೇನೆ. ನಂತರ ಅವುಗಳನ್ನು ಪಂಚರ ಸಮಕ್ಷಮ ಸಾಯಂಕಾಲ **08.15** ರಿಂದ **09.30** ರವರೆಗೆ ಪಂಚನಾಮೆಯನ್ನು ಜರುಗಿಸಿ ಸದರಿ ಸ್ಯಾಚೇಟಗಳನ್ನು ಚಾಸಾ **2** ಮತ್ತು **3** ರವರು ಸಮಕ್ಷಮ ಜಪ್ತು ಪಡಿಸಿಕೊಂಡಿರುತ್ತೇವೆ. ಸಾಕ್ಷಿಯು ಶೋಧನಾ ಸಮುಚ್ಚಿತ ಪತ್ರ ನೋಡಿ ಗುರತಿಸಿದ್ದು

ಅದನ್ನು ಈಗ ನಿಪಿ **1** ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ **1 (ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ದಾಳಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಈಗ ನಿಪಿ **2** ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ **2 (ಎ)** ಎಂದು ಗುರುತಿಸಲಾಯಿತು. ನಿಪಿ **2** ನ್ನು ಚಾಸಾ **2** ಮತ್ತು **3** ರವರಿಗೆ ಓದಿ ಹೇಳಿ ನಂತರ ಅವರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಜಪ್ತು ಪಡಿಸಿದ ಎಲ್ಲಾ ಸಾರಾಯಿ ಸ್ಯಾಚೇಟಗಳ ಜೊತೆಗೆ ಆರೋಪಿತರನ್ನು ಪೊಲೀಸ ಠಾಣೆಗೆ ಕರೆದುಕೊಂಡು ಬಂದು ಸರ್ಕಾರದ ಪರವಾಗಿ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ **3** ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ **3 (ಎ)** ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಹೈವರ್ಡ್ಸ ವಿಸ್ಕಿಯ **90 ML** ನ ಒಂದು ಖಾಲಿ ಸ್ಯಾಚೇಟನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಈಗ **ಮು ಮಾ 1** ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತತನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ MSH ವಕೀಲರಿಂದ:**

ಈ ಪ್ರಕರಣದ ಬಾತ್ಮಿಯು ಚಾಸಾ **4** ರವರಿಗೆ ಬಂದಿದ್ದು ಸದರಿಯವರು ನನಗೆ ತಿಳಿಸಿರುತ್ತಾರೆ. ಚಾಸಾ **4** ರವರಿಗೆ ಹೇಗೆ ಬಾತ್ಮಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಬಾತ್ಮಿ ಬಂದ ಸಮಯದಲ್ಲಿ ನಾನು ಠಾಣೆಯಲ್ಲಿ ಇದ್ದೆ. ಚಾಸಾ **4** ರವರು

ತುರಕರ ಶಿಗಿಹಳ್ಳಿ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಯಾರೋ ಒಬ್ಬ ವ್ಯಕ್ತಿ ಅಕ್ರಮ ಚಟುವಟಿಯಲ್ಲಿ ತೊಡಗಿರುತ್ತಾನೆ ಎಂದು ತಿಳಿಸಿರುತ್ತಾರೆ. ಘಟನಾ ಸ್ಥಳದ ಹತ್ತಿರ ಅಂಗಡಿ ಮುಗ್ಗಟ್ಟುಗಳು ಇರುವುದರಿಂದ ಜನದಟ್ಟನೆ ಹೆಚ್ಚಾಗಿ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಘಟನಾ ಸ್ಥಳದ ಹತ್ತಿರ ಬಸ್ ನಿಲ್ದಾಣ ಇದೆ ಎಂದರೆ ಸಾಕ್ಷಿಯು ಕೆವಿಜಿ ಬ್ಯಾಂಕ್ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಸ್ಥಳದಲ್ಲಿ ಜನದಟ್ಟನೆ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಸದರಿ ಸ್ಥಳದಲ್ಲಿ ಸುಮಾರು ರಾತ್ರಿ **09.00** ಗಂಟೆಯವರೆಗೆ ಜನದಟ್ಟನೆ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ.

ಚಾಸಾ **2** ಮತ್ತು **3** ರವರು ಹಿರೇನಂದಿಹಳ್ಳಿ ಗ್ರಾಮದವರು. ದಾಳಿಗೆ ತುರಕರ ಶಿಗಿಹಳ್ಳಿ ಗ್ರಾಮದ ಜನರನ್ನು ಯಾಕೆ ಕರೆಯಲಿಲ್ಲ ಎಂದರೆ ಸಾಕ್ಷಿಯು ನಾವು ಪಂಚರನ್ನು ನಮ್ಮ ಜೊತೆಗೆ ಕಿತ್ತೂರಿನಿಂದ ಕರೆದುಕೊಂಡು ಹೋಗಿರುತ್ತೇವೆ ಎಂದು ಹೇಳುತ್ತಾರೆ. ಚಾಸಾ **2** ಮತ್ತು **3** ರವರು ನಮ್ಮ ಠಾಣೆಯ ಖಾಯಂ ಪಂಚರೆಂದರೆ ಸರಿಯಲ್ಲ. ನಾವು ಠಾಣೆಯನ್ನು ಬಿಟ್ಟಾಗ ಸಮಯ ಸಾಯಂಕಾಲ **07.30** ಗಂಟೆ ಆಗಿತ್ತು. ತುರಕರ ಶಿಗಿಹಳ್ಳಿಗೆ ಹೋದಾಗ ಸಮಯ ಸಾಯಂಕಾಲ **08.00** ಗಂಟೆ ಆಗಿತ್ತು. ಸದರಿ ಗ್ರಾಮಕ್ಕೆ ಸುಮಾರು **15** ನಿಮಿಷಗಳಲ್ಲಿ ಹೋಗಬಹುದು ಎಂದರೆ ಸರಿಯಲ್ಲ. ನಾವು ಒಟ್ಟು **5** ಜನ ಸೇರಿಕೊಂಡು ದಾಳಿಗೆ ಹೋಗಿರುತ್ತೇವೆ. ನಾವು ಮರೆಯಾಗಿ ನಿಂತು ವಿಕ್ಷಣೆ ಮಾಡಿದ ಸ್ಥಳದ ಚಕಬಂದಿಯನ್ನು ನನಗೆ ಈಗ ಹೇಳಲು ಬರುವುದಿಲ್ಲ. ಘಟನಾ ಸ್ಥಳದ ಚಕಬಂದಿಯನ್ನು ಹೇಳುತ್ತೇನೆ. ನಾವು ದಾಳಿ ಮಾಡಿದಾಗ ಆರೋಪಿತನ ಹತ್ತಿರ **4-5** ಜನ ಸಾರ್ವಜನಿಕರು ಇದ್ದರು ನಮ್ಮನ್ನು ನೋಡಿ ಓಡಿಹೋಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಿರುತ್ತೇವೆ ಆದರೆ

ಸಿಕ್ಕಿರುವುದಿಲ್ಲ. ಸದರಿಯವರನ್ನು ಹಿಡಿದುಕೊಳ್ಳಲು ನಾವು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಘಟನಾ ಸ್ಥಳದಲ್ಲಿ ಎಷ್ಟು ಸಮಯದಿಂದ ಅಕ್ರಮ ಚಟುವಟಿಕೆ ಮಾಡುತ್ತಿದ್ದನು ಎಂದು ನನಗೆ ಗೊತ್ತಿಲ್ಲ. ಆರೋಪಿತನು ನಿಜವಾಗಿ ಅಕ್ರಮ ಚಟುವಟಿಯಲ್ಲಿ ಭಾಗಿಯಾಗಿದ್ದರೆ ಹಣ ಇರುತ್ತಿತ್ತು ಎಂದರೆ ಸರಿಯಲ್ಲ. ಆರೋಪಿನಿಂದ ಯಾವುದೇ ಮುದ್ದೆ ಮಾಲುಗಳನ್ನು ಜಪ್ತು ಪಡಿಸಿಕೊಳ್ಳದೇ ಬೇರೆ ಯಾವುದೇ ಪ್ರಕರಣದ ಮುದ್ದೆಮಾಲುಗಳನ್ನು ಈ ಪ್ರಕರಣಕ್ಕೆ ಸುಳ್ಳಾಗಿ ಅಳವಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಹಾಗೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿಯನ್ನು ಮಾಡಿರುವುದಿಲ್ಲ ಹಾಗೂ ನಾನು ಹೇಳುವಂತೆ ಆರೋಪಿತನು ಯಾವುದೇ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿರದೇ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಆರ್ಥಿಕವಾಗಿ ಸದೃಢನಾಗಿರುವುದರಿಂದ ಇಂತಹ ಅಕ್ರಮ ಚಟುವಟಿಕೆ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗದೇ ಇದ್ದರೂ ಬೇರೆ ಪ್ರಕರಣದಲ್ಲಿರುವ ಮುದ್ದೆಮಾಲುಗಳನ್ನು ಈ ಪ್ರಕರಣಕ್ಕೆ ಅಳವಡಿಸಿಕೊಂಡು ನಮ್ಮ ಠಾಣೆಯ ಅಂಕಿ ಸಂಖ್ಯೆಗಳನ್ನು ತೋರಿಸುವ ಸಲುವಾಗಿ ಆರೋಪಿತನ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ **3** ಕ್ಕೆ ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ **3** ನ್ನು ನಮ್ಮ ಸಿಬ್ಬಂದಿ ಬೆರಳಚ್ಚು ಮಾಡಿದ ನಂತರ ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪು ಮಾಡದೇ

ಇದ್ದರೂ ಸಹ ಅವನ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲಿಸಿ ಅದಕ್ಕೆ ಅನುಕೂಲವಾಗುವಂತೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು**).**

ಓ ಹೇ ಕೇ ಸರಿ ಇದೆ

**ಪ್ರ.ದ.ನ್ಯಾ.ದಂ. ಕಿತ್ತೂರು.**